# ಲಕ್ಷ್ಯಸೆಳೆವ ಲಾಸಿಯಾಂಡ್ರ



ಚಿತ್ರ– ಬರಹ:
**ಮಂಜುನಾಥ ಡಿ.ಎಸ್.**

ಟಿಬೂಕೀನ ಸೆಮಿಡೆಕಾಂಡ್ರ ಸಸ್ಯದ ಎಲೆಗಳು ಹಾಗು ಪುಷ್ಪಗಳು ಅನನ್ಯ ಮತ್ತು ಆಕರ್ಷಣೀಯ. ಕಡು ಹಸಿರು ವರ್ಣದ ಪ್ರತಿದೀಪಕ ಪರ್ಣಗಳು ನಾಲ್ಕಾರು ಅಂಗುಲ ಉದ್ದವಿರುತ್ತವೆ. ಇತರ ಸಸ್ಯಗಳ ಎಲೆಗಳಲ್ಲಿ ಸಾಧಾರಣವಾಗಿ ಕಂಡುಬರುವ ಒಂದು ಪರ್ಣನಾಳಕ್ಕೆ ಬದಲಾಗಿ ಎದ್ದುಕಾಣುವ ಹಲವಾರು ಪರ್ಣನಾಳಗಳನ್ನು ಹೊಂದಿರುವ ಪತ್ರಗಳಿಂದಾಗಿ ಈ ಸಸ್ಯ ವಿಶಿಷ್ಟವಾಗಿದೆ.

ನೇರಳೆ ಬಣ್ಣದ ಐದು ದಳಗಳ ನಡುವೆ ಸಂಕೀರ್ಣ ರಚನೆಯ ಶ್ವೇತ ಶಲಾಕೆಗಳು ಮತ್ತು ನಸುಗೆಂಪು ಕೇಸರಗಳಿಂದ ಕೂಡಿದ ಈ ಸುಮಗಳು ಕಂಗೊಳಿಸುತ್ತವೆ. ಕೇಸರಗಳ ತುದಿಯಲ್ಲಿರುವ ಪರಾಗಾಶಯಗಳು ಆಕ್ಟೊಪಸ್‌ನ ಚೂಷಕಗಳನ್ನು ಹೋಲುತ್ತವೆ. ಲಾಸಿಯಾಂಡ್ರ, ಗ್ಲೋರಿ ಬುಷ್, ಪ್ರಿನ್ಸೆಸ್ ಫ್ಲವರ್ ಇತ್ಯಾದಿ ಹೆಸರುಗಳಿಂದಲೂ ಕರೆಯಲ್ಪಡುವ ಈ ಗಿಡದ ಹೂಗಳು ಆರ್ಕಿಡ್‌ಗಳನ್ನು ಹೋಲುತ್ತವೆ. ಆದರೆ ಈ ಸಸ್ಯವು ಆ ವಂಶಕ್ಕೆ ಸೇರಿದುದಲ್ಲ.

ಬ್ರೆಜಿಲ್ ಮೂಲದ ಈ ಸಸ್ಯ ಪೊದೆ ಮತ್ತು ಮರಗಳಂತೆ ಹತ್ತು ಹದಿನೈದು ಅಡಿ ಎತ್ತರ ಬೆಳೆಯುತ್ತದೆ. ಗಿಡಗಳಲ್ಲಿ ವರ್ಷವಿಡೀ ಹೂಗಳು ಅರಳುತ್ತವೆ. ಸೂರ್ಯನ ಬಿಸಿಲಿನಲ್ಲಿ ಸುಮಗಳು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತವೆ.